**CC 2159/2025**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ**
**ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**
**ಸಿಸಿ ನಂಬರ್** 2159/2025

**ಸಿ ಡಬ್ಲ್ಯೂ** -2
**ಪಿ ಡಬ್ಲ್ಯೂ** -2

**ಸಾಕ್ಷಿಯ ಹೆಸರು -** **ಕಣೀಮೇಶ**
**ತಂದೆಯ ಹೆಸರು -** **ಯಲ್ಲಪ್ಪ**
**ವಯಸ್ಸು -** 40 **ವರ್ಷಗಳು**
**ಉದ್ಯೋಗ -** **ಟೈಲರ್**
**ವಾಸಸ್ಥಳ -** **ರಾಜಾಪುರ, ಹೊಸಪೇಟೆ**

**ಸಾಕ್ಷಿಯನ್ನು ದಿನಾಂಕಃ** 22-11-2025 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಈಗ ನಾನು ನೋಡುತ್ತಿರುವ ದಾಖಲೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಕೃತ್ಯ ಸ್ಥಳ ಪಂಚನಾಮೆಯಲ್ಲಿನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿಃ **5** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **5**(ಎ) ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ಸುಮಾರು **1** ವರ್ಷದ ಹಿಂದೆ ದೇವಾಂಗ ಪೇಟೆಯ ಕೆಳಗಡೆ ಶಂಕ್ರಮ್ಮನ ದೇವಸ್ಥಾನದ ಬಳಿ ಮಾಡಿದ್ದೆ. ನಿಪಿಃ **5** ರ ಪಂಚನಾಮೆಯನ್ನು ಚಾಸಾ **-1** ರವರ ಬಂಗಾರದ ಸರ ಕಳ್ಳತನ ಆದ ಸ್ಥಳದಲ್ಲಿ ಮಾಡಲಾಗಿತ್ತು. ನನ್ನೊಂದಿಗೆ ಚಾಸಾ **-3** ರವರು ಹಾಜರಿದ್ದರು. ಸ್ಥಳವನ್ನು ಚಾಸಾ **-1** ರವರು ತೋರಿಸಿದ್ದರು. ಸದರಿ ಪಂಚನಾಮೆಯನ್ನು ಮಧ್ಯಾಹ್ನ **3.30 - 4.00** ಗಂಟೆಯ ತನಕ ಮಾಡಿರುತ್ತಾರೆ.

ಕಚ್ಚಾ ನಕಾಶೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿಃ **6** ಎಂದು, ಸಾಕ್ಷಿಯ

ಸಹಿಯನ್ನು ನಿಪಿಃ **6**(ಎ) ಎಂದು ಗುರುತಿಸಲಾಯಿತು. ನಿಪಿಃ **6** ಕ್ಕೆ ಸ್ಥಳದಲ್ಲಿಯೇ ಸಹಿ ಮಾಡಿರುತ್ತೇನೆ.

ಈಗ ನಾನು ನೋಡುತ್ತಿರುವ ಒಂದು ಫೋಟೋದಲ್ಲಿನ ವ್ಯಕ್ತಿ ನಾನೇ ಇರುತ್ತೇನೆ. ಸದರಿ ಫೋಟೋವನ್ನು ನಿಪಿಃ **2** ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು 1 ನೇ ಆರೋಪಿ ಪರ ಶ್ರೀ ಬಿ.ಎಂ ವಕೀಲರಿಂದಃ**

ನಾನು ವಾಸ ಮಾಡುವ ಸ್ಥಳದಿಂದ ದೇವಾಂಗ ಪೇಟೆ 4 ಕಿ.ಮೀ ಅಂತರದಲ್ಲಿದೆ. ನನ್ನ ಟೈಲರ್ ಅಂಗಡಿ ಮೊದಲು ವಡಕರಾಯನ ಗುಡಿಯ ಹತ್ತಿರ ಇತ್ತು. ವಡಕರಾಯನ ಗುಡಿ ದೇವಾಂಗ ಪೇಟೆ ಯಲ್ಲಿ ಇದೆ ಅಂದರೆ ಸರಿ . ಈಗ ನಾನು ಎಂ.ಜೆ ನಗರದಲ್ಲಿ ಅಂಗಡಿ ಇಟ್ಟಿರುತ್ತೇನೆ. ದೇವಾಂಗ ಪೇಟೆಯಿಂದ ಎಂಜೆ ನಗರ ಒಂದು ಕಿ.ಮೀ ಅಂತರದಲ್ಲಿದೆ. ಚಾಸಾ -1 ಮತ್ತು ಆಕೆಯ ಅಳಿಯ ವೆಂಕಟೇಶ ಸುಮಾರು 15 ವರ್ಷಗಳಿಂದ ನನಗೆ ಪರಿಚಯ. ಪಂಚನಾಮೆಗೆ ಬರಲು ಪೋಲಿಸರು ದೂರವಾಣಿ ಕರೆ ಮಾಡಿ ಕರೆದಿದ್ದರು. ಯಾವ ಪೋಲಿಸ್ ಕರೆ ಮಾಡಿದ್ದರು ಎಂದು ಹೇಳಲಾಗುವುದಿಲ್ಲ.

ಕೃತ್ಯ ಸ್ಥಳದ ಅಕ್ಕಪಕ್ಕ ಸಾಕಷ್ಟು ಮನೆಗಳು ಇವೆ ಅಂದರೆ ಸರಿ . ನಾವು ಹೋದಾಗ ಪೋಲಿಸರು ಅಕ್ಕಪಕ್ಕದ ಜನರ ಹೇಳಿಕೆಗಳನ್ನು ಪಡೆದಿರುತ್ತಾರೆ. ಅಲ್ಲಿದ್ದ ಜನರು ನಮ್ಮೊಂದಿಗೆ ಪಂಚನಾಮೆಗೆ ಸಹಿ ಮಾಡಲು ಒಪ್ಪಲಿಲ್ಲ. ಬಂಗಾರದ ಸರಕ್ಕೆ ಸಂಬಂಧಿಸಿದ ದಾಖಲೆಯನ್ನು ನನ್ನ ಸಮಕ್ಷಮ ಪೋಲಿಸರು ಜಪ್ತು ಪಡಿಸಿಕೊಂಡಿರಲಿಲ್ಲ. ನನಗೆ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ ಮತ್ತು ನಾನು ಕೃತ್ಯ ಸ್ಥಳಕ್ಕೆ ಹೋಗಿಲ್ಲ ಅಂದರೆ ಸರಿಯಲ್ಲ. ನನಗೆ ಚಾಸಾ -1 ಮತ್ತು ಆಕೆಯ ಕುಟುಂಬದವರು 15 ವರ್ಷಗಳಿಂದ ಗೊತ್ತಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಪೋಲಿಸರ

ಮಾತು ಕೇಳಿ ಸದರಿ ಭಾವಚಿತ್ರ ತೆಗೆಸಿಕೊಂಡಿರುತ್ತೇನೆ ಅಂದರೆ ಸರಿಯಲ್ಲ. ಭಾವಚಿತ್ರವನ್ನು ತೆಗೆದ ಪೋಲಿಸರ ಹೆಸರು ನನಗೆ ಗೊತ್ತಿಲ್ಲ. ಪೋಟೋದಲ್ಲಿ ಕಾಣುವ ಮನೆಯ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ. ಯಾವುದೇ ನಕಾಶೆಯನ್ನು ತಯಾರಿಸಲಿಲ್ಲ ಅಂದರೆ ಸರಿಯಲ್ಲ. ಠಾಣೆಯಲ್ಲಿ ಸೃಷ್ಟೀಸಿದ ದಾಖಲಿಗಳಿಗೆ ಸಹಿ ಮಾಡಿರುತ್ತೇನೆ ಅಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.